## ಸೊರಬದ ಮಾನ್ಯ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ :

ಅ.ದಾ. ನಂ. 49 /2025

ವಾದಿ : ಪಕ್ಕೀರಪ್ಪ ವಡ್ಡರ್ ಬಿನ್ ನಾಗಪ್ಪ

-ವಿರುದ್ಧ-

ಪ್ರತಿವಾದಿ : ಬಸವಂತಪ್ಪ ಬಿನ್ ಹೊನ್ನಪ್ಪ ಬಂಕವಳ್ಳೆರ್

### ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ಮೇರೆಗೆ ವಾದಿ ಹೆಚ್ಚುವರಿ ಮುಖ್ಯ ವಿಚಾರಣೆ ಬಗ್ಗೆ ಸಲ್ಲಿಸಿದ ಪ್ರಮಾಣ ಪತ್ರ;

29/6/26

1) **ಪಕ್ಕೀರಪ್ಪ ವಡ್ಡರ್ ಬಿನ್ ನಾಗಪ್ಪ**, ಹಿಂದೂ, ಸುಮಾರು 41 ವರ್ಷ, ವ್ಯವಸಾಯ ಕಸುಬು, ಚಿಕ್ಕಾಂಶಿಹೊಸೂರು ಗ್ರಾಮಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ. ವಾಸಿ ಆದ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ,

2) ಮೇಲ್ಕಂಡ ಕೇಸಿನಲ್ಲಿ ನಾನು ವಾದಿಯಾಗಿದ್ದು. ದಾವೆಯ ಸಂಪೂರ್ಣ ವಿದ್ಯಾಮಾನವನ್ನು ತಿಳಿದಿರುತ್ತೇನೆ. ಸದರಿ ದಾವೆಯಲ್ಲಿ ದಾವಾ ಸ್ವತ್ತು ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತಾಗಿರುತ್ತದೆ. ಪ್ರತಿವಾದಿ ಎಸ್.ಸಿ. ಜನಾಂಗಕ್ಕೆ ಸೇರಿದ್ದು, ಸದರಿ ಸ್ವತ್ತು ಎಸ್.ಸಿ.ಎಸ್.ಟಿ ಕಾಯ್ದೆ ಅಡಿಯಲ್ಲಿ ಮಂಜೂರಾಗಿದ್ದು, ಸದರಿ ಸ್ವತ್ತನ್ನು ಪರಾಭಾರೆ ಮಾಡುವ ಅಧಿಕಾರ ಪ್ರತಿವಾದಿಗೆ ಇರುವುದಿಲ್ಲ. ಸದರಿ ಸ್ವತ್ತು ನೊಂದಣಿ ಮಾಡಿಸಲು ಸಹ ಕಾನೂನಿನಡಿಯಲ್ಲಿ ಅವಕಾಶವಿರುವುದಿಲ್ಲ. ಪ್ರತಿವಾದಿ ಸದರಿ ವಿಚಾರವನ್ನು ನನಗೆ ಕ್ರಯಕ್ಕೆ ಕೊಡುವ ಬಗ್ಗೆ ಕರಾರುಪತ್ರ ಮಾಡಿಕೊಟ್ಟಿದ್ದು ಆ ಸಂಧರ್ಭದಲ್ಲಿಯೂ ಸಹ ಮೇಲ್ಕಂಡ ವಿಚಾರವನ್ನು ನನಗೆ ತಿಳಿಸಿರುವುದಿಲ್ಲ. ನಾನು ಸಹ ಎಸ್.ಸಿ ಜನಾಂಗಕ್ಕೆ ಸೇರಿದ್ದು, ಮತ್ತು ಅವಿಧ್ಯಾವಂತನಾಗಿದ್ದು, ಹೆಚ್ಚಿನ ಕಾನೂನು ಬಗ್ಗೆ ಅರಿವಿಲ್ಲದೇ ಇರುವುದರಿಂದ ಕ್ರಯದ ವ್ಯವಹಾರವನ್ನು ಮಾಡಿಕೊಂಡಿರುತ್ತೇನೆ. ಸದರಿ ಜಮೀನಿನ ನೊಂದಣಿಗೆ ಕಾನೂನಿನಡಿಯಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಪ್ರತಿವಾದಿ ನನಗೆ ಈವರೆಗೆ ಕ್ರಯಪತ್ರವನ್ನು ನೊಂದಣಿ ಮಾಡಿಸಿಕೊಡದೆ ಕಾಲಹರಣ ಮಾಡಿರುತ್ತಾನೆ.

ಆದ್ದರಿಂದ ಸನ್ನಿಧಿ ನ್ಯಾಯಾಲಯದವರು ದಿ:25-06-2015 ರಂದು ಆದ ಕ್ರಯದ ಕರಾರು ಮೇರೆಗೆ ನಾನು ಪಾವತಿಸಿದ ರೂ 3,50,000/- (ಮೂರು ಲಕ್ಷದ ಐವತ್ತು ಸಾವಿರ)ಗಳನ್ನು ಕರಾರುಪತ್ರದ 15 ದಿನಗಳ ನಂತರ ಪಾವತಿಸಿದ 1,50,000/-(ಒಂದು ಲಕ್ಷದ ಐವತ್ತು ಸಾವಿರ) ರೂಗಳನ್ನು ನನಗೆ ಹಿಂದಿರುಗಿ ಪಾವತಿಸುವಂತೆಯೂ ಹಾಗೂ ಸದರಿ ಮೊತ್ತಕ್ಕೆ ಲುಕ್ಸಾನ್‌ತರೀಕ್ ಶೇ 10% ರಂತೆ ಬಡ್ಡಿಯನ್ನು ಪ್ರತಿವಾದಿ ನನಗೆ ಪಾವತಿಸಲು ತೀರ್ಪು ಮತ್ತು ಆಜ್ಞಾಪ್ತಿ ನೀಡಬೇಕಾಗಿ ಪ್ರಾರ್ಥನೆ.

NOTARY

ಗುರುತಿಸುವವರು

ವಕೀಲರು

Solemnly Affirmed / Sworn to before me this the 29 day of 06 20 26 the contents of this Affidavit having been ... explained to the deponent in ... language known to him who appeared

ಪ್ರಮಾಣಮಾಡುವವರು

**ದಿನಾಂಕಃ 29.06.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಹೆಚ್ಚುವರಿ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎಂ ಆರ್ ಪಿ ವಕೀಲರಿಂದಃ**

ಸಾಕ್ಷಿದಾರರು ತಮ್ಮ ಹೆಚ್ಚುವರಿ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿ, ಅದರಲ್ಲಿ ಬರೆದ ವಿಷಯಗಳೆಲ್ಲವೂ ನಿಜವಿದ್ದು, ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

**ಪಾಟಿ ಸವಾಲುಃ** ಪ್ರತಿವಾದಿ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರು ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

29/6/26

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.